ಓ ಎಸ್ ನಂಃ 43/2018

ಪಿ. ಡಬ್ಲ್ಯೂ ಃ 1

ದಿಃ 14.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಆರ್.ಆರ್ ವಕೀಲರಿಂದ**

10. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

11. ಪ್ರತಿವಾದಿಗಳು ಬರೆದುಕೊಟ್ಟ ನೋಂದಾಯಿತ ಕ್ರಯದ ಕರಾರುಪತ್ರವನ್ನು ನಿ ಪಿ 1 ಎಂದು, ಅದರಲ್ಲಿ ಪ್ರತಿವಾದಿ 1 ರಿಂದ 3 ಹಾಗೂ 1ನೇ ಪ್ರತಿವಾದಿ 4 ನೇ ಪ್ರತಿವಾದಿ ಪರ ಹಾಗೂ ನಾನು ಪ್ರತಿ ಪುಟಗಳಿಗೆ ಸಹಿ ಮಾಡಿದ್ದು, ಕೊನೆಯ ಪುಟದಲ್ಲಿರುವ ಸಹಿಗಳನ್ನು ಕ್ರಮವಾಗಿ ನಿ ಪಿ 1(ಎ) ರಿಂದ ನಿ ಪಿ 1 (ಇ) ಎಂದು, ಋಣಭಾರ ಪತ್ರವನ್ನು ನಿ ಪಿ 2 ಎಂದು, ಆರ್ ಟಿ ಸಿ ಯನ್ನು ನಿ ಪಿ 3 ಎಂದು, ನೋಟೀಸ್ ನ ಕಚೇರಿ ಪ್ರತಿಯನ್ನು ನಿ ಪಿ 4 ಎಂದು, 3 ಅಂಚೆ ರಶೀದಿಗಳನ್ನು ಕ್ರಮವಾಗಿ ನಿ ಪಿ 5 ರಿಂದ ನಿ ಪಿ 7 ಎಂದು, 3 ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿ ಪಿ 8 ರಿಂದ ನಿ ಪಿ 10 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.